O.S. No: 191/2015
D.W:1

ದಿನಾಂಕಃ 13-02-2025 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಪಿ.ಐ.ಬಿ.ವಕೀಲರಿಂದಃ**

ಈ ಕೇಸಿನ ಜಾಗವನ್ನು ನಾನು ನೋಡಿರುತ್ತೇನೆ. ಅದು ಬೀರಮಲೆ ಗುಡ್ಡೆಯಲ್ಲಿ ಇರುತ್ತದೆ. ಸದರಿ ಜಾಗದಲ್ಲಿ ಈಗ ಏನೂ ಇರುವುದಿಲ್ಲ, ಖಾಲಿ ಜಾಗ ಇರುತ್ತದೆ. ಈ ಹಿಂದೆ ದಾವಾ ಆಸ್ತಿಯಲ್ಲಿ ಒಂದು ಸಣ್ಣ ಮನೆ ಇತ್ತು. ಸದರಿ ಮನೆಯಲ್ಲಿ ನನ್ನ ಚಿಕ್ಕ ತಂದೆ ವಾಸುದೇವ ಎಂಬುವವರು ಇದ್ದರು. ಸದರಿ ದಾವಾ ಆಸ್ತಿಯಲ್ಲಿ ತುಂಬಾ ಹಣ ವ್ಯಯ ಮಾಡಿ ಅಭಿವೃದ್ದಿ ಪಡಿಸಿದ್ದೇನೆ ಎಂದು ನನ್ನ ಲಿಖಿತ ಹೇಳಿಕೆಯಲ್ಲಿ ನಾನು ತಿಳಿಸಿಲ್ಲ. ಲಿಖಿತ ಹೇಳಿಕೆಯಲ್ಲಿ ತುಂಬಾ ಹಣ ಹಾಕಿ ಅಭ್ಭಿವೃದ್ದಿ ಪಡಿಸಿದ್ದೇನೆ ಎಂದು ಕಾಣುತ್ತದೆ ಎಂದರೆ ನನಗೆ ಗೊತ್ತಿಲ್ಲ. ಏಕೆ ಆ ರೀತಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾಸುದೇವ ಆಚಾರ್ಯರವರು 2002-03 ಕ್ಕೆ ನನ್ನ ಮನೆಗೆ ಬರುವ ಮೊದಲು ಇದೇ ದಾವಾ ಆಸ್ತಿಯಲ್ಲಿ ವಾಸ ಇದ್ದರು. ದಾವಾ ಆಸ್ತಿಯ ಸ್ವಾಧೀನ ವಾಸುದೇವ ಆಚಾರ್ಯರವರು ಮೃತಪಟ್ಟ ನಂತರ ವಾದಿ ಮತ್ತು ಅವರ ಗಂಡ ರವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ನನ್ನ ಪ್ರಕಾರ ನಿ.ಪಿ.3, 5 ಮತ್ತು 6 ರ ದಾಖಲೆಯಲ್ಲಿರುವ ವಾಸುದೇವ ಆಚಾರ್ಯರವರ ಸಹಿಯಾಗಿದ್ದು ಅದನ್ನು ವಾದಿಯವರು ದುರುಪಯೋಗ ಪಡಿಸಿರುತ್ತಾರೆ. ಯಾವ ರೀತಿ ದುರುಪಯೋಗ ಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಗಂಡ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅವರು ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂಬುದರ ಬಗ್ಗೆ ನಾನು ನನ್ನ ವಕೀಲರಿಗೆ ತಿಳಿಸಿದ ಬಗ್ಗೆ ನೆನಪಿಲ್ಲ. ವಾಸುದೇವ ಆಚಾರ್ಯರವರ ಸಹಿ ಇರುವ ನಿ.ಪಿ.3, 5 ಮತ್ತು 6 ರ ದಾಖಲೆಗಳು ವಾದಿಗೆ ಅಥವಾ ಆಕೆಯ ಗಂಡನಿಗೆ ಹೇಗೆ ಸಿಕ್ಕಿತು ಎಂದು ನನಗೆ ಹೇಳಲು ಸಾಧ್ಯವಿಲ್ಲ.

ವಾಸುದೇವ ಆಚಾರ್ಯರವರಿಗೆ ಓದಿ ಬರೆಯುವಷ್ಟು ವಿದ್ಯಾಭ್ಯಾಸ ಇತ್ತು . ಅವರು ಸಹಿ ಹಾಕುತ್ತಿದ್ದರು. ಸದರಿ ವಾಸುದೇವ ಆಚಾರ್ಯರವರು ಖಾಲಿ ಹಾಳೆಗೆ ಸಹಿ ಮಾಡುವ ವ್ಯಕ್ತಿಯಾಗಿದ್ದರಾ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ವಾಸುದೇವ ಆಚಾರ್ಯರವರಿಗೆ ವ್ಯವಹಾರ ಜ್ಞಾನ ಇತ್ತು. ಸದರಿ

ವಾಸುದೇವ ಆಚಾರ್ಯರವರು ಖಾಲಿ ಹಾಳೆಗೆ ಸಹಿ ಮಾಡಿಸಿಕೊಂಡಿದ್ದರು ಎಂದು ನನ್ನ ಬಳಿ ಹೇಳಿಲ್ಲ. ನನಗೆ ವಾಸುದೇವ ಆಚಾರ್ಯರವರು ನಮ್ಮ ಮನೆಗೆ ಬಂದ ನಂತರದ ವಿಚಾರಗಳು ತಿಳಿದಿರುತ್ತದೆ. ಆದರೆ ಹಿಂದಿನದ್ದು ನನಗೆ ಗೊತ್ತಿಲ್ಲ. ಸದರಿ ವಾಸುದೇವ ಆಚಾರ್ಯರವರು ಸಾಯುವುದಕ್ಕಿಂತ ಮುಂಚೆ 11 ವರ್ಷ ನನ್ನ ಬಳಿ ಇದ್ದರು. ಸದರಿ 11 ವರ್ಷ ನನ್ನ ಬಳಿ ಇದ್ದಾಗ ತಾನು ಖಾಲಿ ಹಾಳೆಗೆ ಸಹಿ ಮಾಡಿದ್ದೇನೆ ಎಂಬುದರ ಬಗ್ಗೆ ನನ್ನ ಬಳಿ ಹೇಳಿಲ್ಲ.

ನಿ.ಪಿ.4 ದಾವಾ ಆಸ್ತಿಗೆ ಸಂಬಂಧಿಸಿದ ಮೂಲ ಸಾಗುವಳಿ ಚೀಟಿ ಎಂದರೆ ಸರಿ. ನಿ.ಪಿ.4 ನ್ನು ವಾದಿಯವರು ಹಾಜರುಪಡಿಸಿರುತ್ತಾರೆ. ಸದರಿ ನಿ.ಪಿ.4 ವಾದಿಯ ಬಳಿ ಹೇಗೆ ಹೋಯಿತು ಎಂದು ನನಗೆ ಗೊತ್ತಿಲ್ಲ. ಸದರಿ ವಾಸುದೇವ ಆಚಾರ್ಯರವರು ನನ್ನ ಬಳಿ ಬಂದ ನಂತರ ದಾವಾ ಆಸ್ತಿಯ ದಾಖಲೆಗಳು ಎಲ್ಲಿ ಎಂದು ಅವರ ಬಳಿ ನಾನು ಕೇಳಿಲ್ಲ. ವಾಸುದೇವ ಆಚಾರ್ಯರವರ ಹೆಂಡತಿ 2000ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ. ಅದಕ್ಕೂ ಮೊದಲು ಅವರ 2 ಮಕ್ಕಳು ಮೃತಪಟ್ಟಿರುತ್ತಾರೆ. ನಿ.ಪಿ.3, 5 ಮತ್ತು 6 ರಲ್ಲಿ ಕಂಡುಬರುವ ವಾಸುದೇವ ಆಚಾರ್ಯರವರ ಸಹಿಗಳು ನಕಲಿ ಸಹಿಗಳು ಎಂದು ನೀವು ಹೇಳಿದ್ದೀರಾ ಎಂದರೆ ನನಗೆ ಗೊತ್ತಾಗುವುದಿಲ್ಲ.

ದಾವೆಯ 1ನೇ ಪ್ರತಿವಾದಿ ವಾಸುದೇವ ಆಚಾರ್ಯರವರ ಅಣ್ಣ. ನನ್ನ ತಂದೆ 1ನೇ ಪ್ರತಿವಾದಿಗಿಂತ ಹಿರಿಯವರಾಗಿರುತ್ತಾರೆ. ನನ್ನ ತಂದೆ ಈಗ ಜೀವಂತ ಇಲ್ಲ. ವಾಸುದೇವ ಆಚಾರ್ಯರವರು 2011 ರಲ್ಲಿ ಪ್ರಾಯದಿಂದ ಮೃತಪಟ್ಟಿರುತ್ತಾರೆ. ಸದರಿ ಅವರು ಸಾಯುವ ವರೆಗೂ ಆರೋಗ್ಯ ವಾಗಿ ಇದ್ದರು. ನಿ.ಡಿ.3 ವಾಸುದೇವ ಆಚಾರ್ಯರವರ ಹೆಸರಿನಲ್ಲಿ ಇತ್ತು. ಸದರಿ ತೀರ್ವೆ ದಾಖಲೆ 2013 ರಿಂದ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ತೀರ್ವೆಯನ್ನು ನಾನೇ ಕಟ್ಟುತ್ತಿದ್ದೇನೆ, ಆದರೆ ರಶೀದಿಗಳು ಈಗ ಇಲ್ಲ.

ನನ್ನ ಪ್ರಕಾರ ವಾದಿಯ ಗಂಡ ನಾರಾಯಣ ಗೌಡ ರವರಿಗೆ ನಿ.ಪಿ.5 ರಂತೆ ದಾಖಲೆ ಆಗಿಲ್ಲ. ನಿ.ಪಿ.5 ರ ದಾಖಲೆ ಹೇಗೆ ಆಯಿತು ಎಂದು ನಾನು ನೋಟರಿಯವರ ಹತ್ತಿರ ವಿಚಾರ ಮಾಡಿಲ್ಲ. ನಿರ್ಮಲ ಕುಮಾರ್ ನೋಟರಿ ವಕೀಲರು ನನಗೆ ಪರಿಚಯ ಇಲ್ಲ. ನಿ.ಪಿ.5 ರ ಸಾಮಾನ್ಯ ಅಧಿಕಾರ

ಪತ್ರವನ್ನು ವಾದಿಯ ಗಂಡನಿಗೆ ವಾಸುದೇವ ಆಚಾರ್ಯರವರೇ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.3 ರ ಕರಾರನ್ನು ವಾಸುದೇವ ಆಚಾರ್ಯರವರೇ ವಾದಿಯವರೊಂದಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನಿ,ಪಿ.6 ನ್ನು ಕೂಡಾ ವಾಸುದೇವ ಆಚಾರ್ಯರವರೇ ದಾವಾ ಆಸ್ತಿ ವಾದಿಗೆ ಹೋಗಬೇಕೆಂದು ಬರೆದಿಟ್ಟು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.6 ಕ್ಕೆ ಸಾಕ್ಷಿದಾರರಾಗಿರುವ ಜನಾರ್ಧನ ಆಚಾರ್ಯ, ಅಕ್ಕ ರೈ ರವರ ಬಳಿ ಸಾಕ್ಷಿ ಹಾಕಿದ ಬಗ್ಗೆ ನಾನು ವಿಚಾರಿಸಿಲ್ಲ. ನಿ.ಪಿ.3 ಕ್ಕೆ ಸಾಕ್ಷಿದಾರರಾಗಿರುವ ಜನಾರ್ಧನ ಆಚಾರ್ಯ, ಅಕ್ಕ ರೈ ರವರ ಬಳಿ ಸಾಕ್ಷಿ ಹಾಕಿದ ಬಗ್ಗೆ ನಾನು ವಿಚಾರಿಸಿಲ್ಲ. ಅಕ್ಕ ರೈ ಮತ್ತು ನಿರ್ಮಲ್ ಕುಮಾರ್ ಜೈನ್ ರವರನ್ನು ವಾದಿಯ ಪರವಾಗಿ ವಿಚಾರಣೆ ಮಾಡಿದ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸದರಿ ಸಾಕ್ಷಿದಾರರು ನ್ಯಾಯಾಲಯಕ್ಕೆ ಬಂದು ವಾಸುದೇವ ಆಚಾರ್ಯರವರೇ ದಾಖಲೆಗಳನ್ನು ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುವ ವಿಚಾರ ನನಗೆ ಗೊತ್ತಿಲ್ಲ. ವಾದಿಯವರಿಗೆ ಮತ್ತು ವಾಸುದೇವ ಆಚಾರ್ಯರವರ ನಡುವೆ ಅನ್ಯೋನ್ಯತೆ ಇತ್ತು ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ವಾದಿಯವರಿಂದ ವಾಸುದೇವ ಆಚಾರ್ಯರವರು ಪ್ರತಿಫಲ ಮೊತ್ತದ ಪೈಕಿ ಮುಂಗಡವಾಗಿ ರೂ.35,000/- ಹಣ ಪಡೆದುಕೊಂಡು ನಿ.ಪಿ.3 ರಂತೆ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಮಾಡಿಕೊಂಡಿದ್ದರೂ ಕೂಡಾ ಒಂದು ವೇಳೆ ಕ್ರಯಚೀಟಿ ಆಗದಿದ್ದಲ್ಲಿ ತನ್ನ ಮರಣದ ನಂತರ ದಾವಾ ಆಸ್ತಿ ವಾದಿಗೆ ಹೋಗಬೇಕೆಂದು ವಾಸುದೇವ ಆಚಾರ್ಯರವರು ನಿ.ಪಿ.6 ರಂತೆ ಉಯಿಲು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.3,5 ಮತ್ತು 6 ರ ವಿಚಾರಗಳು ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.5 ರ ದಾಖಲೆಯನ್ನು ಕೂಡಾ ವಾಸುದೇವ ಆಚಾರ್ಯರವರು ಸ್ವ ಇಚ್ಚೆಯಿಂದ ವಾದಿಯ ಗಂಡನಿಗೆ ಅಧಿಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿ.ಪಿ.3 ರಂತೆ ಕರಾರು ಆಗುವ ಸಮಯದಲ್ಲಿ ನಿ.ಪಿ.4 ರ ಮೂಲ ದಾಖಲೆಯನ್ನು ವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ದಾಖಲೆಗಳ ಪ್ರಕಾರ ದಾವಾ ಆಸ್ತಿ ವಾದಿಗೆ ಹೋಗಬೇಕೆಂದರೆ ಸರಿಯಲ್ಲ.

O.S. No: 191/2015
D.W:1

ವಾದಿಯ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ ಅನುಮತಿ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.